<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ</u>

<u>ಮೊಳಕಾಲ್ಮೂರು</u>

<u>ಪ್ರಕರಣ ಸಂಖ್ಯೆ: ಓ.ಎಸ್ ಸಂಖ್ಯೆ: 146 /2021</u>

| | | | |
|---|---|---|---|
| ಹೆಸರು | : ಹೆಚ್. ಬಸವನಾಯಕ | ಪಿ.ಡಬ್ಲ್ಯೂ | : 2 |
| ತಂದೆ/ಗಂಡ ಹೆಸರು | : ಎಂ.ಟಿ. ಹನುಮಂತ ನಾಯಕ | | |
| ವಯಸ್ಸು | : 50 ವರ್ಷ | | |
| ಉದ್ಯೋಗ | : ಪತ್ರ ಬರಹಗಾರ | ದಿನಾಂಕ : 08.02.2023 | |
| ವಾಸ | : ಮೊಳಕಾಲ್ಮೂರು | | |

**ಸಾಕ್ಷಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು**
**ಮುಖ್ಯ ವಿಚಾರಣೆ ಮಾನ್ಯ ಎ.ಪಿ. ಪಿ. ರವರಿಂದ**

ನಾನು ಪತ್ರ ಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಕ್ರಯಪತ್ರ, ದಾನ ಪತ್ರ, ಪ್ರಾಮಿಸರಿ ಪತ್ರ, ಮರಣ ಶಾಸನ, ಜಿ.ಪಿ.ಎ., ಮತ್ತು ಕರಾರು ಪತ್ರಗಳನ್ನು ಬರೆಯುತ್ತೇನೆ. ನನಗೆ ಪಾಪಣ್ಣ ಎಂಬುವವರ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಈ ದಿನ ನ್ಯಾಯಾಲಯದಿಂದ ಸಮನ್ಸ್ ಬಂದ ಕಾರಣ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನಾನು ಈ ಪ್ರಕರಣದ ಪ್ರಾಮಿಸರಿ ಪತ್ರವನ್ನು ಬರೆದಿರುತ್ತೇನೆ. ಸದರಿ ಪತ್ರವನ್ನು ತಿಪ್ಪೇಸ್ವಾಮಿ ಬಿನ್ ಗುಡೇಕೋಟೆ ಬೋರಯ್ಯ ಪ್ರತಿವಾದಿ ಪಾಪಣ್ಣ ಎಂಬುವವರಿಗೆ ಬರೆದುಕೊಟ್ಟಿರುತ್ತಾರೆ. ಸದರಿ ಪತ್ರದಲ್ಲಿ ಒಟ್ಟು 1,10,000/-ಗಳಿಗೆ ಪ್ರಾಮಿಸರಿ ಪತ್ರವನ್ನು ಬರೆದಿದ್ದು, ಅದರಲ್ಲಿ ಬಡ್ಡಿ 2.00 ರೂಗಳ ಬಡ್ಡಿಯಂತೆ ಮಾತಾಗಿರುತ್ತದೆ. ಸದರಿ ಪತ್ರವನ್ನು ನಾನು ಬರೆದಿದ್ದು, ನಾನು ಸಹಿ ಮಾಡಿರುತ್ತೇನೆ. ಸದರಿ ಪತ್ರಕ್ಕೆ ಸಾಕ್ಷಿದಾರರಾಗಿ ಪಾಲಯ್ಯ, ಸಣ್ಣಮಲ್ಲಯ್ಯ, ಎ ಪಾಪನಾಯ್ಕ, ಬೋರಯ್ಯ ಮತ್ತು ಗೋವಿಂದಪ್ಪ ಎಂಬುವವರು ಸಹಿ ಮಾಡಿರುತ್ತಾರೆ. ಪ್ರತಿವಾದಿ ತಿಪ್ಪೇಸ್ವಾಮಿ ಸಹ ಸಹಿ ಮಾಡಿರುತ್ತಾರೆ. ಸಾಕ್ಷಿಯು ನಿಪಿ: 1 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

<u>**ಪಾಟೀಸವಾಲು: ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.**</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಮೊಳಕಾಲ್ಮೂರು